ದಿನಾಂಕ **15.11.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ- ವಾದಿ ಪರ ವಕೀಲಾದ ಶ್ರೀ ಐ.ಆರ್.ಪಿ ರವರಿಂದಃ-</u>**

ವಾದಿ **1** ಎ ರವರು ನೀಡಿದ ನೋಟರೀ ದೃಢೀಕೃತ ಜಿ ಪಿ ಎ ಯನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಲು ಪ್ರತಿವಾದಿ ಪರ ವಕೀಲರು ತಕರಾರು ಮಾಡಿದ್ದು, ತಕರಾರಿಗೆ ಒಳಪಟ್ಟು ನಿ.ಪಿ **1** ಎಂದು ಗುರುತಿಸಲಾಯಿತು, ಒ.ಎಸ್.ನಂ.**20/1998** ರ ವಾದಪತ್ರದ ದೃಢೀಕೃತ ನಕಲನ್ನು ನಿಪಿ-**2,** ಕೌಂಟರ ಕ್ಲೈಮ್‌ಗೆ ಸಲ್ಲಿಸಿದ ಪ್ರತ್ಯುತ್ತರವನ್ನು ನಿಪಿ-**3,** ತೀರ್ಪಿನ ದೃಢೀಕೃತ ನಕಲನ್ನು ನಿಪಿ-**4,** ಪಹಣಿಯನ್ನು ನಿಪಿ-**5,** ದಿನಾಂಕ **09.10.2020** ರ ವಕೀಲರ ನೋಟೀಸನ್ನು ನಿಪಿ-**6,** ದಿನಾಂಕ **05.10.2020** ರಂದು ಶ್ರೀಮಂಗಲ ಪೋಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ನೀಡಿರುವ ಸ್ವೀಕೃತಿಯನ್ನು ನಿಪಿ-**7,** ದಿನಾಂಕ **05.10.2020** ರಂದು ನೀಡಿರುವ ಹಿಂಬರಹವನ್ನು ನಿಪಿ-**8,** ಅಂಚೆ ಸ್ವೀಕೃತಿಗಳನ್ನು ನಿಪಿ-**9** ರಿಂದ **12,** ಎಫ್.ಡಿ.ಪಿ.ನಂ.**6/2014** ರಲ್ಲಿನ ಅರ್ಜಿಯ ದೃಢೀಕೃತ ನಕಲನ್ನು ನಿಪಿ-**13,** ಎಫ್.ಡಿ.ಪಿ.ನಂ.**6/2014** ರಲ್ಲಿ ನ್ಯಾಯಾಲಯದ ಆಯುಕ್ತರು ಸಲ್ಲಿಸಿರುವ ವರದಿಯ ದೃಢೀಕೃತ ನಕಲನ್ನು ನಿಪಿ-**14,** ಎಫ್.ಡಿ.ಪಿ.ನಂ.**6/2014** ರಲ್ಲಿ ಸಲ್ಲಿಸಿರುವ ಮಹಜರಿನ ದೃಢೀಕೃತ ನಕಲುಗಳನ್ನು

ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-15 ಮತ್ತು 16, ನಕ್ಷೆಯನ್ನು ನಿಪಿ-17, ಎಫ್.ಡಿ.ಪಿ.ನಂ.6/2014 ರಲ್ಲಿ 2 ನೇ ಪ್ರತಿವಾದಿ ಹಾಗೂ 2 ರಿಂದ 9 ನೇ ಅರ್ಜಿದಾರರು ಸಲ್ಲಿಸಿರುವ ತಕರಾರಿನ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-18 ಮತ್ತು 19 ಎಂದು ಗುರುತಿಸಲಾಯಿತು.

ಪ್ರತಿವಾದಿಗಳ ಪರ ವಕೀಲರು ಹಾಜರು ಇದ್ದು, ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.